ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 2, Sep-Oct, 51-59
©*IIMRD*, Mysuru

IIMRD JOURNALS
www.iimrd.com

# ಜಲದೊಳಗಿರುವ ಕಲಿ
## (ಧರೆಗೆ ದೊಡ್ಡವರು ಶ್ರೀ ಮಂಟೇಸ್ವಾಮಿ ಅನುಲಕ್ಷಿಸಿ)

**ರಾಚಪ್ಪ ಎನ್[*] ; ಡಾ. ವಿಜಯಲಕ್ಷ್ಮಿ ಮನಾಪುರ[**]**
[*]ಸಂಶೋಧನಾ ವಿದ್ಯಾರ್ಥಿ; [**]ಸಹ ಪ್ರಾಧ್ಯಾಪಕರು
ಜಾನಪದ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

***ಸಾರಾಂಶ (Abstract)***

*ಪ್ರಪಂಚದಲ್ಲಿರುವ ಎಲ್ಲಾ ನಾಗರಿಕತೆಗಳ ಉಗಮಕ್ಕೆ ನದಿಯೇ ಮೂಲ. ತಮಸಾ ನದಿ ತೀರದಲ್ಲಿಯೇ ಆದಿಕಾವ್ಯ ಹುಟ್ಟಿದ್ದು, ಸರಯೂ ನದಿ ತೀರದಲ್ಲಿ ರಾಮಾಯಣದ ಕಥೆ ಆರಂಭವಾಗಿರುವುದು. ರಾಮಾಯಣ ಕಾವ್ಯದಲ್ಲಿ ಧ್ವನಿಸುವಂತೆ ಕಾವ್ಯ ಎಂಬ ಸಂಸ್ಕೃತಿಗೂ ಜನಪದ ಎಂಬ ನಾಗರಿಕತೆಗೂ ನದಿಯೇ ಮೂಲ. ನೀರು ಪಂಚಭೂತಗಳಲ್ಲಿ ಅಗ್ರಗಣ್ಯ ಸ್ಥಾನವನ್ನು ಹೊಂದಿದೆ. ಪ್ರಪಂಚದ ಸಂಸ್ಕೃತಿಯಲ್ಲಿ ನೀರು ಪೂಜ್ಯನೀಯ ಸ್ಥಾನವನ್ನು ಹೊಂದಿದೆ. ಭಾರತದಲ್ಲಿ ಜಲಪರಂಪರೆ ಪ್ರಾಚೀನವಾಗಿರುವಂತೆ ಅಗ್ನಿಪರಂಪರೆ ಅತ್ಯಂತ ಪ್ರಭಾವಶಾಲಿಯಾದುದ್ದಾಗಿದೆ. ಇಲ್ಲಿ ಮಾತೃ ಸಂಸ್ಕೃತಿಯನ್ನು ಜಲಪರಂಪರೆ ಎಂದು ಪಿತೃ ಸಂಸ್ಕೃತಿಯನ್ನು ಅಗ್ನಿಪರಂಪರೆಯೆಂದು ಗುರುತಿಸಬಹುದಾಗಿದೆ. ಧರೆಗೆ ದೊಡ್ಡವರಾದ ಶ್ರೀಮಂಟೇಸ್ವಾಮಿಯವರು ಕಲಿಯುಗದಲ್ಲಿ ನಡೆಯಬಹುದಾದ ಕೊಲೆ, ದರೋಡೆ, ಅತ್ಯಾಚಾರ, ವ್ಯಭಿಚಾರ, ಅನಾಚಾರಗಳನ್ನು ನೋಡಲಾಗದೆ ಕಲಿಯನ್ನು ಕಾವೇರಿ ನದಿ (ಜಲ)ಯೊಳಗೆ ಮುಳುಗಿಸಿದ. ಹಾಗಾಗಿ ಮುಂದೊಂದು ದಿನ ಜಲಪ್ರಳಯದ ಮೂಲಕ ಸೃಷ್ಟಿಯು ನಾಶವಾದರೆ ನಂತರ ಪಾತಾಳ ಲೋಕದಿಂದ ಮೇಲೆ ಬಂದು ಮರುಸೃಷ್ಟಿ ಮಾಡುವೆನೆಂದು ಧರೆಗೆದೊಡ್ಡವರು ಪಾತಾಳ ಲೋಕದಲ್ಲಿ ಧ್ಯಾನಮಗ್ನರಾಗಿದ್ದಾರೆ. ಈ ಲೇಖನದಲ್ಲಿ ಶ್ರೀಮಂಟೇಸ್ವಾಮಿಯವರ ಕಾಲಜ್ಞಾನ, ಅವರ ವಿದ್ವತ್ತು, ಪವಾಡ ಮುಂತಾದವುಗಳನ್ನು ಜಾನಪದೀಯ ದೃಷ್ಟೀಕೋನದಿಂದ ವಿಶ್ಲೇಷಿಸಲಾಗಿದೆ.*

***ಮುಖ್ಯಪದಗಳು (Keywords):*** ಕಲಿಯುಗ, ಕಲ್ಯಾಣ, ಕಾವೇರಿ ನದಿ, ಜಲ, ಜಾನಪದ, ಮಂಟೇಸ್ವಾಮಿ, ಶಿವ.

**ಪೀಠಿಕೆ**

ಜನಪದರು ತಮ್ಮ ಕಾಯಕದ ಸಮಯಗಳಲ್ಲಿ ಹಲವು ರೀತಿಯ ಹಾಡುಗಳು, ಒಗಟು, ಹಾಸ್ಯ, ಗಾದೆ, ಸೋಬಾನೆ ಪದಗಳ ಜೊತೆಗೆ ಮೌಖಿಕ ಪರಂಪರೆಯ ಮೂಲಕ ಜನಪದ ಕಾವ್ಯಗಳನ್ನು ತಲೆಮಾರಿನಿಂದ

*Please cite this article as: ರಾಚಪ್ಪ.ಎನ್ ಮೂಗೂರು. (2021).* ಜಲದೊಳಗಿರುವ ಕಲಿ (ಧರೆಗೆ ದೊಡ್ಡವರು ಶ್ರೀ ಮಂಟೇಸ್ವಾಮಿ ಅನುಲಕ್ಷಿಸಿ). *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(2). ಪು.ಸಂ. 51–59*

ತಲೆಮಾರಿಗೆ ಉಳಿಸಿಕೊಂಡು ಬಂದಿದ್ದಾರೆ. ಅವುಗಳಲ್ಲಿ ಮಂಟೇಸ್ವಾಮಿ ಕಾವ್ಯ, ಮಲೆಮಹದೇಶ್ವರ ಕಾವ್ಯ, ಜುಂಜಪ್ಪ, ಎಲ್ಲಮ್ಮನ ಕಾವ್ಯ ಪ್ರಮುಖವಾದವು. *ಕಲೇವಾಲ* ಎಂಬ ಕಾವ್ಯವು ಫಿನ್‌ಲ್ಯಾಂಡಿನ ಜನಪದರ ಮೌಖಿಕ ಕಾವ್ಯವಾಗಿ ಪ್ರಸಿದ್ಧಿ ಹೊಂದಿದೆ.

ಧರೆಗೆ ದೊಡ್ಡವರಾದ ಶ್ರೀಮಂಟೇಸ್ವಾಮಿಯವರನ್ನು ಧಾರ್ಮಿಕ ನಾಯಕನಾಗಿ ಮತ್ತು ಕಾಲಜ್ಞಾನಿಯಾಗಿ ನೋಡಬಹುದಾಗಿದೆ. ಜನಪದರಿಂದ ಶಿವಸ್ವರೂಪಿ ಎಂದು ಕರೆಸಿಕೊಳ್ಳುವ ಶ್ರೀ ಮಂಟೇಸ್ವಾಮಿಯವರು ನಾಲ್ಕು ಯುಗಗಳನ್ನು ತಿಳಿದಿದ್ದರು. ನಾಲ್ಕು ಯುಗಗಳಲ್ಲಿ ಕೊನೆಯದಾದ ಕಲಿಯುಗದಲ್ಲಿ ಸಂಭವಿಸುವ ಭಯಂಕರ ಬದಲಾವಣೆಗಳನ್ನು ಮಂಟೇಸ್ವಾಮಿಯವರು ಭೂಲೋಕಕ್ಕೆ ತಿಳಿಸಲು ಸ್ವತಃ ಬಸವಣ್ಣನ ಕಲ್ಯಾಣ ಪಟ್ಟಣಕ್ಕೆ ಬರುತ್ತಾರೆ. ಕಲ್ಯಾಣ ಪಟ್ಟಣದಿಂದ ಜಲಮೂಲವನ್ನು ಹುಡುಕುತ್ತಾ ಬರುವಾಗ ದಾರಿಯುದ್ಧಕ್ಕೂ ಹಲವು ಬದಲಾವಣೆಗಳೊಂದಿಗೆ ದೀನರು, ರೈತರು, ಕೂಲಿ–ಕಾರ್ಮಿಕರಿಗೆ ಅನುಕೂಲ ಮಾಡುತ್ತಾ ಶಿಷ್ಯರನ್ನು ಪಡೆದು ಕೊಳ್ಳುತ್ತಾ ದಕ್ಷಿಣದ ಕಾವೇರಿ ನದಿಯ ಸಮೀಪವಿರುವ ಬೊಪ್ಪೇಗೌಡನಪುರಕ್ಕೆ ಬರುತ್ತಾರೆ.

ಕಾಲಜ್ಞಾನಿಯಾದ ಮಂಟೇಸ್ವಾಮಿಯವರ ಪ್ರಕಾರ ಕಲಿ, ಕಲಿಯುಗ ಅತ್ಯಂತ ಘೋರ(ಕೆಟ್ಟದ್ದು)ವಾದದ್ದು. ಈ ಕಲಿಗಾಲವನ್ನು ತಾವು ನೋಡುವುದಿಲ್ಲ ಎಂದು ನಿರ್ಧರಿಸಿ ಶಿಷ್ಯರ ಮೂಲಕ ಜನಸಾಮಾನ್ಯರಿಗೆ ಕಲಿಯುಗದ ಬಗ್ಗೆ ತಿಳಿಸುತ್ತಾ ಬರುತ್ತಾರೆ. ಮುಂದೆ ಸೃಷ್ಟಿಯು ನಾಶವಾದ ಮೇಲೆ ನಾನು ಮತ್ತೆ ಜೀವಿಗಳನ್ನು ಸೃಷ್ಟಿಸುತ್ತೇನೆ ಎಂದೇಳಿ ಧರೆಗೆ ದೊಡ್ಡವರು ಪಾತಾಳ ಲೋಕದಲ್ಲಿ ಧ್ಯಾನಮಗ್ನರಾಗಿದ್ದಾರೆ.

**ಜಲದೊಳಗಿರುವ ಕಲಿ (ಮಂಟೇಸ್ವಾಮಿ ದೃಷ್ಟಿಕೋನ)**

ಜಡೆಮುಡಿ ಹೊಂದಿರುವ ಪರಶಿವನು ಬೋರ್ಗರೆದು ಬರುತ್ತಿರುವ ಗಂಗೆಯನ್ನು ಜಡೆಯ ಮೂಲಕ ನಿಯಂತ್ರಿಸಿ ಗಂಗೆಯನ್ನು ತನ್ನ ಜಡೆಯಲ್ಲಿ ಸುತ್ತಿ, ಚಂದ್ರನನ್ನು ಅರ್ಧಾಕೃತಿಯಲ್ಲಿ ಜಡೆಯ ತುದಿಯಲ್ಲಿ ಅಲಂಕರಿಸಿಕೊಂಡನು. ಅದೇ ರೀತಿ ಕೈಲಾಸದಿಂದ ಧರೆಗೆ ದೊಡ್ಡವರಾದ ಶಿವಸ್ವರೂಪಿ ಶ್ರೀ ಮಂಟೇಸ್ವಾಮಿಯವರು ಕಲ್ಯಾಣ ಪಟ್ಟಣಕ್ಕೆ ಬರುತ್ತಾರೆ. ಕಲ್ಯಾಣ ಪಟ್ಟಣದ ಹೊರಗೆ ಕಾಲುದಾರಿಯಲ್ಲಿ ಒಂದು ಕಲ್ಯಾಣಿ ಕೊಳವಿದ್ದು, ಕೊಳದ ಮೇಲ್ಭಾಗದ ನಾಲ್ಕು ಮೂಲೆಗಳಲ್ಲಿ ವಿಶಾಲವಾದ ಆಯಕಟ್ಟಿನ ಕಲ್ಲುಮಂಟಪವಿತ್ತು. ಶ್ರೀಧರೆಗೆದೊಡ್ಡವರು ಬಳಲಿಕೆ ನೀಗಿಸಿ ಕೊಳ್ಳಲು ಕಲ್ಲಿನ ಮಂಟಪದಲ್ಲಿ ಕುಳಿತುಕೊಂಡರು. ಕೊಳದಲ್ಲಿ ಶಿವಶರಣರು ಸ್ನಾನ ಮಾಡುತ್ತಿದ್ದರು. ಕೆಲವರು ಸ್ನಾನ ಮುಗಿಸಿ ಬಟ್ಟೆಗಳನ್ನು ತೊಡುತ್ತಿದ್ದರು. ಕಲ್ಯಾಣಿ ಕೊಳದ ಸುತ್ತಮುತ್ತ ಹಸಿರು ತುಂಬಿದ ಮರಗಿಡಗಳು ನೋಡುವವರ ಕಣ್ಣಿಗೆ ತಂಪೆರೆಯುತ್ತಿತ್ತು. ಪ್ರಕೃತಿ ಸೌಂದರ್ಯ ನೋಡುತ್ತಿದಂತೆಯೇ ಮಂಟೇಸ್ವಾಮಿಯವರ ಮುಖದಲ್ಲಿ ಮಂದಹಾಸ ತುಂಬಿಕೊಳ್ಳುತ್ತದೆ.

ಧರೆಗೆದೊಡ್ಡವರಾದ ಶ್ರೀಮಂಟೇಸ್ವಾಮಿಯವರು ಪ್ರಕೃತಿಯನ್ನು ನೋಡುತ್ತಿದ್ದಂತೆಯೇ ದೃಷ್ಟಿ ಬದಲಿಸಿದಾಗ ಕಲ್ಯಾಣ ಪಟ್ಟಣದ ಬಿಜ್ಜಳ ರಾಜನ ಸೈನಿಕನೂ, ಶಿವಶರಣರೂ ಆದಂತಹ 'ಮಡಿವಾಳ ಮಾಚಯ್ಯ' ನವರು ಬಟ್ಟೆ ಮೂಟೆಯನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗುತ್ತಿರುತ್ತಾರೆ.

ಮಡಿವಾಳ ಮಾಚಯ್ಯನವರ ಶಿವಭಕ್ತಿಯನ್ನು ಅರಿತ್ತಿದ್ದ ಧರೆಗೆದೊಡ್ಡವರು ಅವರಲ್ಲಿರುವ ಭಕ್ತಿಯನ್ನು ಜನಸಾಮಾನ್ಯರಿಗೆ ತಿಳಿಸುವಂತಾಗಿಸಬೇಕು, ತನ್ನನ್ನು ನಂಬಿದವನಿಗೆ ಜನಸಾಮಾನ್ಯರಿಂದ ಪೂಜಿಸಲ್ಪಡುವಂತಾಗಿಸಬೇಕೆಂದು ನೆನೆದುಕೊಂಡು ಮುಂದೆ ಸಾಗುತ್ತಿದ್ದ ಮಡಿವಾಳ ಮಾಚಯ್ಯನವರನ್ನು ಧರೆಗೆ ದೊಡ್ಡವರು 'ಮಾಚಯ್ಯ... ಮಾಚಯ್ಯ... ಶಿವಶರಣ... ಮಾಚಯ್ಯ ಸ್ವಲ್ಪ ಬಾರಯ್ಯ ಇಲ್ಲಿ ಎಂದು ಕೂಗಿದರು. ಕೂಗಿನ ಧ್ವನಿಯನ್ನು ಆಲಿಸಿದ ಮಾಚಯ್ಯ ತಕ್ಷಣ ನಿಂತು... ಹಿಂದಕ್ಕೆ ತಿರುಗಿ ನೋಡುತ್ತಾರೆ. ಕಲ್ಲು ಮಂಟಪದ ಹತ್ತಿರ ಬಂದು ಮಾಚಯ್ಯನವರು ಧರೆಗೆದೊಡ್ಡವರನ್ನು ನೋಡುತ್ತಾ ನಡುಬಾಗಿ ನಮಸ್ಕರಿಸುತ್ತಾ "ಶರಣು... ಶರಣಾರ್ಥಿ ಸ್ವಾಮಿ... ತಮ್ಮನ್ನು ನೋಡಿದರೆ ಜಗದೊಡೆಯರಂತೆ ಕಾಣುತ್ತಿರುವಿರಿ, ನನ್ನನ್ನು... ಕರೆದಿರಾ... ಮಹಾಸ್ವಾಮಿ" ಎನ್ನುತ್ತಾರೆ. ಹೌದು... ಮಾಚಯ್ಯ... ನಿನ್ನನ್ನು ಕರೆದೆ. ನೋಡಯ್ಯ ನನ್ನ ಶಿವಕಂತೆಯನ್ನು ಮಡಿ ಮಾಡಿ ಕೊಡುವೆಯಾ? ಎಂದಾಗ ಖಂಡಿತವಾಗಿ ಮಾಡಿಕೊಡುವೆ ಮಹಾಸ್ವಾಮಿ ಎಂದರು.

ಧರೆಗೆದೊಡ್ಡವರು ನೋಡಯ್ಯ ಮಾಚಯ್ಯ ಮಡಿ ಮಾಡಿಕೊಡುವೆನೆಂದದ್ದು ನನಗೆ ಸಂತೋಷವಾಯಿತು. ನಾನು ಹುಟ್ಟಿದ ಕಾಲದಿಂದಲೂ ನನ್ನ ಶಿವಕಂತೆಯನ್ನು ಮಡಿ ಮಾಡಿಕೊಡಲು ಯಾರಿಗೂ ಕೊಟ್ಟಿಲ್ಲ. ಈ ಶಿವಕಂತೆಯನ್ನು ಮಡಿ ಮಾಡಲು ಒಂದು ನಿರ್ಬಂಧವಿದೆ ಮಾಚಯ್ಯ. "ಈ... ಶಿವಕಂತೆಯನ್ನು... ನೀರಿಗೆ ಅದ್ದಬಾರದು. ಕಲ್ಲಿನ ಮೇಲೆ ಒಗೆಯಬಾರದು, ಉಬ್ಬೆಯಲ್ಲಿಟ್ಟು ಬೇಯಿಸಬಾರದು, ನೀಲಿ ಹಾಕಬಾರದು. ಈ ಶಿವಕಂತೆಯಲ್ಲಿರುವ ಯಾವುದೂ ಒಂದು ನತರು, ಒಂದು ಜೀವ ಜಂತು ಸಹ ಸಾಯಬಾರದು. ಅಂತೇನಾದರೂ, ಅವುಗಳು ಸತ್ತು... ಹೋದರೆ ನಾನು ಈ ಶಿವಕಂತೆಯನ್ನು ಮುಟ್ಟಿಯೂ ನೋಡುವುದಿಲ್ಲ. ಶನಿವಾರ ಉಬ್ಬೆಗೆ ಹಾಕಿ, ಭಾನುವಾರ ರಾಹು ಮಡಿ ಮಾಡಿ, ಸೋಮವಾರದ ಶಿವಪೂಜೆಗೆ ತಂದು ಕೊಡಯ್ಯ, ನಿನಗೆ... ಧರ್ಮ ಬರುತ್ತದೆ. ನೀನು ಕೇಳಿದ್ದನ್ನು ಕೊಡುವೆ" ಎಂದು ಮಂಟೇಸ್ವಾಮಿಯವರು ಹೇಳಿದರು.

ಈ ಮೇಲಿನ ವಾಕ್ಯದಂತೆ ಶಿವಸ್ವರೂಪಿ ಧರೆಗೆದೊಡ್ಡವರು ಮಡಿವಾಳ ಮಾಚಯ್ಯನಿಗೆ ತಮ್ಮ ಶಿವಕಂತೆಯನ್ನು ಕೊಟ್ಟರು. ಆ ಶಿವಕಂತೆಯನ್ನು ತೆಗೆದುಕೊಂಡ ಶಿವಶರಣರು ಒಂದು ಕ್ಷಣ ಯೋಚಿಸಿದರು. ಮಾಚಯ್ಯನಿಗೆ ಶಿವಕಂತೆಯನ್ನು ನೀರಿನಲ್ಲಿ ಅದ್ದಬಾರದು, ಒಗೆಯಬಾರದು, ಉಬ್ಬೆಯ ಮೇಲಿಟ್ಟು ಬೇಯಿಸಬಾರದು ಎಂದಾಗ ಸರಿ ಎಂದು ಸ್ವೀಕರಿಸಿದರು. ಆದರೆ ರಾಹು ಮಡಿ ಮಾಡಬೇಕೆಂದು ಹೇಳಿದಾಗ ಈ 'ರಾಹು ಮಡಿ' ಎಂದರೆ ಏನು ಎಂದು ತಿಳಿಯದ ಮಾಚಯ್ಯ ಮರುಪ್ರಶ್ನೆ ಮಾಡಿದರೆ ನಾನು ಎಲ್ಲಿ ಮಾತಿಗೆ ತಪ್ಪುತೇನೆಂದು ತಿಳಿದು, ಮಾತಿಗೆ ತಪ್ಪಿ ನಡೆಯುವುದಕ್ಕಿಂತ ಆತ್ಮಹತ್ಯೆಯೇ ಸರಿಯೆಂದು ನಿರ್ಧರಿಸಿದ್ದರು.

ಮಾಚಯ್ಯನವರು ಸ್ವಲ್ಪ ದೂರ ಹೊರಡಲು ಸಿದ್ಧರಾಗುತ್ತಿದ್ದಂತೆಯೇ ಮಂಟೇಸ್ವಾಮಿಯವರು ತಡೆದು ನೋಡಯ್ಯ ನೀನು ರಾಹು ಮಡಿ ಮಾಡಿಕೊಡಲು ತೆಗೆದುಕೊಂಡು ಹೋದ ಮೇಲೆ ಮಡಿ ಮಾಡದೆ ಆಗದೆಂದು ತಂದರೆ ನಾನು ಅದನ್ನು ಸ್ವೀಕರಿಸುವುದಿಲ್ಲ. ಮಡಿ ಮಾಡಿದರೆ ನಿನಗೆ, ನಿನ್ನ ಕುಟುಂಬಕ್ಕೆ ನಾನು ಏನು ಕೇಳಿದರು ಕೊಡುತ್ತೇನೆ. ನಿಮಗೆ ಕೋಟಿ ಕೋಟಿ ಪುಣ್ಯ ಬರುತ್ತದೆಂದರು.

ನದಿಯ ಕಡೆ ಶಿವಕಂತೆಯನ್ನು ತೆಗೆದುಕೊಂಡು ಮಾಚಯ್ಯನವರು ಹೊರಟರು. ಸೂರ್ಯ ಮೇಲೇರಿ ಪಶ್ಚಿಮ ದೆಡೆಗೆ ಇಳಿಯುವ ಹೊತ್ತಿಗಾಗಲೇ ಮಲ್ಲಿಗೆ ಮಹದೇವಮ್ಮ ಮಡಿ ಮಾಡಬೇಕಿದ್ದ ಬಟ್ಟೆಗಳು ಹಾಗೂ ಊಟವನ್ನು ತೆಗೆದುಕೊಂಡು ತನ್ನ ಪತಿ ಮಾಚಯ್ಯನವರ ಬಳಿಗೆ ಬಂದರು. ಆದರೆ ಬಟ್ಟೆಗಳನ್ನು ಒಗೆಯದೆ ಒಂದು ಕಡೆ ಇಟ್ಟು ಮಖಾಡೆ ಮಲಗಿದ್ದ ಮಾಚಯ್ಯನನ್ನು ನೋಡಿ ಹೆಂಡತಿ ಮಲ್ಲಿಗೆ ಮಹದೇವಮ್ಮ ಗಾಬರಿಯಾಗಿ ಓಡಿ ಬಂದು ಗಂಡನ ಮೈ ಕೈಗಳನ್ನು ಮುಟ್ಟಿ ನೋಡಿ ಅವರನ್ನು ಕೂರಿಸಿ, ಯಾಕೆ ಹೀಗೆ ಮಲಗಿದ್ದೀರಾ ಸ್ವಾಮಿ ಎಂದು ಕೇಳುತ್ತಾ ತಾನು ತಂದಿದ್ದ ಬಟ್ಟೆಯನ್ನು ಕೆಳಗೆ ಇಡುತ್ತಿದ್ದಳು. ಮಾಚಯ್ಯ ಹಿಂದೆ ಶಿವಕಂತೆಯನ್ನು ತೆಗೆದುಕೊಂಡ ಬಗೆ ಹಾಗೂ ರಾಹು ಮಡಿ ಬಗ್ಗೆ ತಿಳಿಸಿದರು. ಇದಕ್ಕೆ ಮಲ್ಲಿಗೆ ಮಹದೇವಮ್ಮ ಚಿಂತಿಸಬ್ಯಾಡ್ರಿ ನಾನು ರಾಹು ಮಡಿ ಬಗ್ಗೆ ತಿಳಿದಿದ್ದೇನೆ ನೀವು ಆರಾಮವಾಗಿ ಊಟ ಮಾಡಿ ಈ ರಾಹು ಮಡಿಯನ್ನ ಮನೆಯಲ್ಲಿ ಮಾಡಬಹುದು ಎಂದು ಗಂಡನಿಗೆ ಧೈರ್ಯ ತುಂಬಿದಳು.

ಮನೆಗೆ ಬಂದಾಗ ಪತ್ನಿ ಮಹದೇವಮ್ಮ ರಾಹು ಮಡಿ ವಿವರಿಸಿದಾಗ ದಿಗ್ಭ್ರಾಂತನಾದ ಶಿವಶರಣ ಮಾಚಯ್ಯ ಶಿವ... ಶಿವ... ನನ್ನ ಕೈಯ್ಯಾರ ಕೈ ಹಿಡಿದ ಮಡದಿಯನ್ನೇ ಕೊಲ್ಲುವುದೇ ಇದು ನನ್ನಿಂದ ಆಗದು... ನೀನು ಹೇಳಿದ ರೀತಿ ಮಡಿ ಮಾಡಿ ನನ್ನನ್ನೇ ಕೊಂದು ಶಿವಶರಣರಿಗೆ ಒಪ್ಪಿಸಿ ಬಿಡು ಎಂದು ದುಃಖಿತನಾದನು. ಆದರೆ ವಿಧಿಯಿಲ್ಲದೆ ಮಲ್ಲಿಗೆ ಮಹದೇವಮ್ಮ ತಂದು ಕೊಟ್ಟ ಖಡ್ಗದಿಂದ ಅವಳ ಕತ್ತನ್ನು ಕತ್ತರಿಸಿ ರಾಹುಮಡಿ [1] ಮಾಡಿ ದುಃಖಿಸುತ್ತಾ ಕುಳಿತಿದ್ದ. ಮಾಚಯ್ಯ ಸುತ್ತಲೂ ನೋಡಿ ಸೂರ್ಯ ಮುಳುಗುತ್ತಿದ್ದನ್ನು ಗಮನಿಸಿ ಮಡಿಯನ್ನು ಶರಣರಿಗೆ ಒಪ್ಪಿಸುವುದು ತಡವಾಗಬಾರದೆಂದು ಕೈಗಳಿಂದ ಕಣ್ಣೀರನ್ನು ಒರೆಸಿಕೊಂಡು ಶಿವಕಂತೆಯನ್ನು ತೆಗೆದುಕೊಂಡು ರಸ್ತೆ ಕಡೆ ನೋಡಿದಾಗ ಬಸವಣ್ಣನವರ ಜೊತೆ ಧರೆಗೆ ದೊಡ್ಡವರು ಬರುತ್ತಿದ್ದನ್ನು ಗಮನಿಸಿ ಬೆದರಿದರು.

ಮಾಚಯ್ಯನವರು ಮಂಟೇಸ್ವಾಮಿಯವರಿಗೆ ಸ್ವಾಮಿ ತಡವಾದಕ್ಕೆ ಕ್ಷಮಿಸಿ ಎಂದು ಹೇಳುತ್ತಿದ್ದಂತೆ ಧರೆಗೆ ದೊಡ್ಡವರು ನಿನ್ನನ್ನೇಕೆ ಧಣಿಸಬೇಕೆಂದು ನಾನೇ ಬಂದೆ ಮಾಚಯ್ಯ ಎಂದರು. ಸ್ವಾಮಿಗಳು ನಾನು ಶಿವಕಂತೆಯನ್ನು ಸ್ವೀಕರಿಸಬೇಕಾದರೆ ದಂಪತಿಗೊಳಗೂಡಿ ಕೊಡಬೇಕೆಂದರು. ಮಾಚಯ್ಯನವರು 'ಸ್ವಾಮಿ ಎಲ್ಲವನ್ನು ತಿಳಿದವರು ಪತ್ನಿಯನ್ನು ಹೇಗೆ ಕರೆಯಲಿ ಎಂದಾಗ ಮಂಟೇಸ್ವಾಮಿಯವರು ಕರಿಯಯ್ಯಾ... ಕರಿ ಎಂದರು. ಮಡದಿಯನ್ನು ನೆನೆದು ದುಃಖಿಸುತ್ತಾ ಮಾಚಯ್ಯ ಮಾದೇವಿ... ಮಲ್ಲಿಗೆ ಮಹದೇವಿ ಬಾ ಮಹಾಸ್ವಾಮಿಯವರು ನಿನ್ನ ಕರಿ ಅಂತಿದ್ದಾರೆ ಎಂದಾಗ ಮನೆಯ ಒಳಗಿನಿಂದ ಮಲ್ಲಿಗೆ ಮಹದೇವಮ್ಮ "ಏನೂ... ಅಂದ್ರೆ... ನನ್ನ ಕರೆದ್ರಾ...? ಎನ್ನುತ್ತಾ ಬರುತ್ತಾರೆ. ಹೀಗೆ ಒಂದು ಪವಾಡವನ್ನೇ ಸೃಷ್ಟಿಸಿ ಮಂಟೇಸ್ವಾಮಿಯವರು ರಾಹು ಮಡಿಯನ್ನು ಸ್ವೀಕರಿಸಿ ಮಾಚಯ್ಯ ಮತ್ತು ಮಲ್ಲಗೆ ಮಹದೇವಮ್ಮನವರ ಶಿವಭಕ್ತಿಯನ್ನು ಲೋಕಕ್ಕೆ ತಿಳಿಸುತ್ತಾ ಮುಂದೆ ಲೋಕ ಕಲ್ಯಾಣಕ್ಕೆ ಸಾಗುತ್ತಾರೆ.

[1] ರಾಹು ಮಡಿ ಎಂದರೆ ತಲೆಯನ್ನು ಕತ್ತರಿಸಿ ರಕ್ತವನ್ನು ಬಾಣಲೆಗೆ ಹಾಕಿ ಶಿವಕಂತೆಯನ್ನು ರಕ್ತಕ್ಕೆ ಹದ್ದಿದಾಗ ಶಿವಕಂತೆಯಲ್ಲಿರುವ ಜೀವರಾಶಿಗಳು ರಕ್ತವನ್ನು ಕುಡಿಯುವ ಆಸೆಯಿಂದ ಶಿವಕಂತೆಯಿಂದ ರಕ್ತದಲ್ಲಿಗೆ ಹರಿದು ಬರುತ್ತವೆ. ನಂತರ ಬೆನ್ನನ್ನು ಹಾಸುಗಲ್ಲನ್ನಾಗಿಸಿ ಶಿವಕಂತೆಯನ್ನು ಒಗೆದು, ಕುಸುರಿ ಎದೆ ಬಗೆದು ಎರಡು ಗುಂಡಿಗೆ ಕಿತ್ತು ನೆಲದ ಮೇಲಿಟ್ಟು ಅದರ ಮೇಲೆ ಬಾಣಲೆ ಮಡಗಿ ಬಸವಣ್ಣನ ನೆನೆದಾಗ ಒಲೆ ಹೊತ್ತಿ ಉರಿಯ ತೊಡಗುತ್ತದೆ. ಉಬೆಗೆ ಹಾಕಿ ಮೆದುಳಿನಿಂದ ಗಂಜಿ ಮಾಡಿ ಮತ್ತು ಈಲಿ ತೆಗೆದು ನೀಲಿ ಹಾಕಿದರೆ ರಾಹು ಮಡಿ ಮುಗಿಯತ್ತದೆ.

ಶಿವಸ್ವರೂಪಿ ಜಡೆಮುಡಿ ಶ್ರೀಮಂಟೇಸ್ವಾಮಿಯವರು ಒಂದು ದಿನ ನೆರಳಿನಲ್ಲಿ ಮಲಗಿ ಉತ್ತರದ ಕಡೆ ದೃಷ್ಟಿ ಹರಿಸಿದಾಗ ಪವಿತ್ರ ಜಲ ಮೂಲವಿರುವ ನೆಲೆಯಾದ ಇಂದಿನ ಬೊಪ್ಪಂಪುರದ ಬೊಪ್ಪೇಗೌಡನ ಕುರಿ ಮಂದೆ ಕಾಣಿಸುತ್ತದೆ. ಆಗ ನಾನು ನೆಲೆಸಲು ಇದು ಸರಿಯಾದ ಸ್ಥಳವೆಂದು ಆಯ್ಕೆ ಮಾಡಿಕೊಳ್ಳುತ್ತಾರೆ. ನಂತರ ಧರೆಗೆ ದೊಡ್ಡವರು ಕಲ್ಯಾಣ ಪಟ್ಟಣದಿಂದ ಕಾವೇರಿ ನದಿಯ ಸಮೀಪದಲ್ಲಿರುವ ಬೊಪ್ಪಂಪುರದ ಬೊಪ್ಪೇಗೌಡನಪುರಕ್ಕೆ ಆಗಮಿಸಲು ಅಣಿಯಾಗುತ್ತಾರೆ. ಈ ಸಂದರ್ಭದಲ್ಲಿ ಅವರ ಪ್ರಿಯ ಶಿಷ್ಯ ರಾಚಪ್ಪಾಜಿ ಕಲ್ಯಾಣದಿಂದ ಮಂಟೇಸ್ವಾಮಿಯವರ ಜೊತೆ ಬರುತ್ತಾರೆ.

ಮಂಟೇಸ್ವಾಮಿಯವರು ಕಾವೇರಿ ನದಿಯಲ್ಲಿ ಸ್ನಾನಕ್ಕೆ ಹೋಗುವ ಸಂದರ್ಭದಲ್ಲಿ ಮಾಚಯ್ಯನವರು ಸ್ವಾಮಿ ನಾನು ನಿಮ್ಮ ಆತ್ಮಲಿಂಗವನ್ನು ನೋಡಬೇಕೆಂದು ಕೇಳಿಕೊಳ್ಳುತ್ತಾರೆ. ಧರೆಗೆ ದೊಡ್ಡವರು ಸರಿ ಮಾಚಯ್ಯ ನಾನು ಕೂಗಿದಾಗ ಬಂದು ಆತ್ಮಲಿಂಗದ ದರ್ಶನ ಪಡೆ ಎಂದು ಹೊರಟರು. ಸ್ನಾನ ಮಾಡುತ್ತಿದ್ದ ಮಂಟೇಸ್ವಾಮಿಯವರು ಮಾಚಯ್ಯ... ಮಾಚಯ್ಯ... ಎಂದು ಕೂಗಿದ ಶಬ್ದಕ್ಕೆ ಮಾಚಯ್ಯ ಓಡಿ ಹೋಗಿ ಆತ್ಮಲಿಂಗದ ದರ್ಶನ ಪಡೆಯುತ್ತಿದ್ದಂತೆ ಮೂರ್ಛೆ ಹೋದರು. ಸ್ನಾನ ಮುಗಿಸಿ ಬಂದು ಮಂಟೇಸ್ವಾಮಿಯವರು ಮಾಚಯ್ಯನನ್ನು ಎಚ್ಚರಿಸಿದರು. ಎಚ್ಚರಗೊಂಡ ಮಾಚಯ್ಯ ಭಯಭೀತನಾಗಿ ಧರೆಗೆ ದೊಡ್ಡವರನ್ನು ನೋಡುತ್ತಿದ್ದನು. ನಂತರ ಮಾಚಯ್ಯ ಬುದ್ಧಿ ನಿಮ್ಮ ಆತ್ಮಲಿಂಗದ ದರ್ಶನ ಪಡೆದ ನಾನೇ ಧನ್ಯ ಎಂದರು.

ಮಂಟೇಸ್ವಾಮಿಯವರು ತಲಕಾಡಿನ ಮರಳು ರಾಶಿಯನ್ನು ನೋಡುತ್ತಿದ್ದಾಗ ವ್ಯಕ್ತಿಯೊಬ್ಬ ತನ್ನ ಹೆಗಲ ಮೇಲೆ ಮಡದಿಯನ್ನು ಹೊತ್ತುಕೊಂಡು, ಮುದಿ ವಯಸ್ಸಿನ ತಂದೆಯ ತಲೆಯ ಮೇಲೆ ಮಲಗಿ ಸುಖಪಡುವ ಹಾಸಿಗೆಯನ್ನು ಹೊರಿಸಿಕೊಂಡು, ತಾಯಿಯ ಕೈಯಲ್ಲಿ ಎಲೆ–ಅಡಿಕೆ ಉಗಿಯುವ ಡಬ್ಬಿಯನ್ನು ಹಿಡಿಸಿಕೊಂಡು ಹಾಗೂ ಅವಳ ಬಟ್ಟೆಯನ್ನು ತಲೆಯ ಮೇಲೆ ಹೊರಸಿಕೊಂಡು ಬರುವ ವ್ಯಕ್ತಿಯನ್ನು ಮಂಟೇಸ್ವಾಮಿಯವರು ನೋಡುತ್ತಾರೆ. ಆಗ ಧರೆಗೆ ದೊಡ್ಡವರು ಮಾಚಯ್ಯ ಅಲ್ಲಿ ಯಾರೋ ಒಬ್ಬ ಬರುತ್ತಿದ್ದಾನೆ ಅವನು ಯಾರೆಂದು ವಿಚಾರಿಸಿಕೊಂಡು ಬಂದು ಹೇಳಪ್ಪ ಎಂದರು.

ಮಾಚಯ್ಯ ಆ ಮನುಷ್ಯನ ಹತ್ತಿರ ಬಂದು ಸ್ವಾಮಿ ನೀವು ಯಾರು? ಎಂದು ಕೇಳಿದಾಗ ಅವನು ನಾನು **'ಕಲಿ'** ಎಂದನು. ಆಗ ಮಾಚಯ್ಯನು ಧರೆಗೆ ದೊಡ್ಡವರ ಬಳಿ ಬಂದು ಸ್ವಾಮಿ ಅವನು **'ಕಲಿ'**ಯಂತೆ ಎಂದು ಹೇಳುತ್ತಾರೆ. ಧರೆಗೆ ದೊಡ್ಡವರು ಅವನನ್ನು ಕಣ್ಣಾರೆ ನೋಡಲಾರೆ ಎಂದು ಹೇಳಿ ಕಲಿ ಮತ್ತು ಅವನ ಹೆಂಡತಿಯನ್ನು ಕಾವೇರಿ ನದಿಯಲ್ಲಿ ಮುಳುಗಿಸಿ ಬಿಡುತ್ತಾರೆ. ಅವನ ತಂದೆ–ತಾಯಿಗಳು ಮರಳಲ್ಲಿ ಲಿಂಗವಾಗಿ ನಿಲ್ಲುತ್ತಾರೆ.

ಪುರಾಣಗಳಲ್ಲಿ ಬರುವ ನಾಲ್ಕು ಯುಗಗಳಲ್ಲಿ ಮೊದಲನೇಯದು ಸತ್ಯಯುಗ. ಸತ್ಯಯುಗದಲ್ಲಿ ಸತ್ಯ, ಅಹಿಂಸೆ ಹಾಗೂ ಮನುಷ್ಯತ್ವವನ್ನು ಧಯೆ, ಧರ್ಮವಾಗಿ ಒಳಗೊಂಡು ಸುಖ, ಶಾಂತಿ, ನೆಮ್ಮದಿಯಿಂದ ಜನರು ಜೀವಿಸುತ್ತಿದ್ದ ಕಾಲ, ಈ ಕಾಲದಲ್ಲಿ ವೇದಗಳು ಬೆಳಕಿಗೆ ಬಂದವು. ತ್ರೇತಾಯುಗದಲ್ಲಿ ರಾಜ, ಸಾಮ್ರಾಟರು, ಪಂಗಡ, ರಾಜ್ಯ, ಸಾಮ್ರಾಜ್ಯ ಮುಂತಾದವು ನೆಲೆಸಿದ್ದ ಕಾಲಘಟ್ಟ. ಈ ಕಾಲದಲ್ಲಿ ಶ್ರಮವಿರುವ ಕೆಲಸ ಕಾರ್ಯಗಳಾದ ಬೇಸಾಯ, ಗಣಿಗಾರಿಕೆ, ಶಸ್ತ್ರ ತಯಾರಿಕೆ ಮೊದಲಾದವು ನಡೆಯುತ್ತಿದ್ದ

ಕಾಲ. ದ್ವಾಪರಯುಗದಲ್ಲಿ ರಾಜ್ಯ–ಸಾಮ್ರಾಜ್ಯಗಳ ವಿಸ್ತರಣೆಗಾಗಿ ಸಾಮ್ರಾಜ್ಯಶಾಹಿ ಸ್ಥಾಪನೆ ಮಾಡಲು ಯುದ್ಧಗಳು ನಡೆದ ಕಾಲ. ಈ ಕಾಲಘಟ್ಟದಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನ ಉತ್ತಮವಾಗಿತ್ತು. ಪ್ರಸ್ತುತ ನಾವು ಜೀವಿಸುತ್ತಿರುವ ಈ ಯುಗವೇ ಕಲಿಯುಗ. ಇಲ್ಲಿ ಅಹಿಂಸೆ, ಸ್ವಾರ್ಥಪರತೆ, ಅತ್ಯಾಚಾರ, ಹತ್ಯೆ, ಕೊಲೆ ಸುಲಿಗೆ ವ್ಯಾಪಕವಾಗಿ ಧರ್ಮ ದಿಕ್ಕೆಟ್ಟು ಹೋಗಿ ಅಧರ್ಮ ಜೀವಿಸಲು ಪ್ರಾಶಸ್ತ್ಯ ಹೊಂದಿರುವ ಕಾಲ. ವಿಷ್ಣುವಿನ ಹತ್ತನೇ ಅವತಾರವಾದ **'**ಕಲ್ಕಿ**'**ಯ ಬದ್ಧ ವೈರಿ ಈ ಕಲಿ. ಜನಪದರು ಕಲಿಯನ್ನು ಕುರಿತು **"**ಕೇಡು(ಕಲಿ)ಗಾಲಕ್ಕೆ ನಾಯಿ ಮೊಟ್ಟೆ ಇಡ್ತು**"** ಎಂಬ ಗಾದೆಯನ್ನು ಹೇಳಿದ್ದಾರೆ.

ಕಲಿಯ ಬಗ್ಗೆ ಸಂಪೂರ್ಣ ತಿಳಿದಿದ್ದ ಧರೆಗೆದೊಡ್ಡವರು; ನಾನು ಈ ಕಲಿಯನ್ನು ಕಣ್ಣಾರೆ ನೋಡಲಾರೆ, ನಾಳೆ (ಮುಂದೆ) ಬರುವ ಕಲಿಯನ್ನು ನಾನು ಹೇಳುತ್ತೇನೆ ತಾಳೆಗರಿ ತೆಗೆದುಕೊಂಡು ಈಗಲೇ ಬರೆದುಕೊಳ್ಳಿ ಎಂದು ಹೇಳಿದಾಗ ಜೋಳಿಗೆಯಲ್ಲಿದ್ದ ನವಿಲುಗರಿ, ತಾಳೆಗರಿಯ ಕಟ್ಟನ್ನು ಹಿಡಿದುಕೊಂಡು ಮಾಚಯ್ಯ ಬರೆಯಲು ಅಣಿಯಾಗುತ್ತಾರೆ. ಆಗ ಮಂಟೇಸ್ವಾಮಿಯವರು ತಮ್ಮ ಕಾಲಜ್ಞಾನದಿಂದ ಮುಂದೆ ನಡೆಯಬಹುದಾದದನ್ನು ಕೆಳಗಿನಂತೆ ನುಡಿದಿದ್ದಾರೆ.

***ತಲಕಾಡು ಮರಳು ಸಣ್ಣಕ್ಕಿ ಸಣ್ಣ ಬೇಳೆ ಆಗಬೇಕು***
***ಹುತ್ತದೊಳಗಿರುವ ಹಾವಿಗೆ ರೆಕ್ಕೆ ಬಂದು ಹಾರಬೇಕು***
***ಆಕಾಶದಲ್ಲಿ ಹಾರುವ ಹಾವಿನ ನೆರಳಿಗೆ ಸಪ್ತ ಸಮುದ್ರ ಬತ್ತಬೇಕು***
***ಕಲ್ಲು ಕೋಳಿ ಕೂಗಬೇಕು***
***ಕಲ್ಲು ಬಸವ ಗುಟರಾಕಬೇಕು***
***ಪಟ್ಟದ ರಂಗಯ್ಯ ಎದ್ದು ಮಾತನಾಡಬೇಕು***

***ಏಳು ವರ್ಷದ ಹೆಣ್ಣು ಮಗಳು ತಾಯಿ ಆಗಬೇಕು***
***ಹೆಂಡತಿಯ ಹೆಗಲ ಮೇಲೆ ಹೊತ್ತು ಹೋಗಬೇಕು***
***ಹೆತ್ತ ತಂದೆ ತಾಯಿ ಹೆಂಡತಿ ಹಾಸಿಗೆ ಹೊತ್ತು ನಡೆಯಬೇಕು***
***ಊರು ಕಾಡಾಗ ಬೇಕು, ಕಾಡು ಊರಾಗಬೇಕು***
***ಮಸಣದಲಿ ಮನೆಯಾಗಬೇಕು***
***ಮನೆಯೊಳಗೆ ಮಸಣವಾಗಬೇಕು***

***ಸೊಸೆ ಅತ್ತೆ ಆಗಬೇಕು***
***ಅತ್ತೆ ಸೊಸೆಯಾಗಬೇಕು***
***ಅತ್ತೆ ಮಾತು ಹಿಂದಾಗಬೇಕು***
***ಸೊಸೆ ಮಾತು ಮುಂದಾಗಬೇಕು***
***ಅತ್ತೆಗೆ ಹರಕಲು ಚಾಪೆ ಆಗಬೇಕು***

*ಹೆಂಡತಿಗೆ ಹೂವಿನ ಹಾಸಿಗೆ ಆಗಬೇಕು*
*ಕೊತ್ತಿಗೆ ಕೊಂಬುಡಬೇಕು, ನುಚ್ಚಕ್ಕಿಗೆ ಮೊಳಕೆ ಬರಬೇಕು*
*ಅಟ್ಟದ ಕಬ್ಬಿಣ ತುಕ್ಕಿಡಿಯಬೇಕು*
*ಕಾರಕಾರಕೆಲ್ಲ ಸರ್ಕಾರ ಎಂಬುದು ಬರಬೇಕು*
*ಕೆರೆಯ ನೀರಿಗೆ ಕಿತ್ತಾಡಬೇಕು*
*ಬಾವಿ ನೀರಿಗೆ ಬಡಿದಾಡಬೇಕು*
*ಗಂಡ ಸತ್ತ ಮುಂಡೆ ಗಂಡು ಮಗು ಹೆರಬೇಕು*
*ಕುಲ ಗೋತ್ರದೊಳಗೆ ಗರ್ತಿ ಗೌಡಿ ಆಗಬೇಕು*
*ಗೌಡಿ ಗರ್ತಿ ಆಗಬೇಕು*
*ನ್ಯಾಯ ಪಂಚಾಯಿತಿ ಒಳಗೆ ಗೌಡಿ ಮಕ್ಕಳ ಮಾತು ನಡೆಯಬೇಕು*

*ತಿನ್ನುವ ಅನ್ನ ಅಳೆಯೋಕೆ ಕೆಜಿ ಬಟ್ಟು ಬರಬೇಕು*
*ಸೇರು, ಪಾವು ಆಗಬೇಕು*
*ತಕ್ಕಡಿಯಲೀ ತೂಕ ಆಗಬೇಕು*
*ಅಪ್ಪನಿಗೆ ಮಗಳು ಹೆಂಡತಿ ಆಗಬೇಕು*
*ಹೆತ್ತ ತಾಯಿಗೆ ಮಗನೆ ಗಂಡನಾಗಬೇಕು*
*ಒಂದು ಗಂಡಿಗೆ ಏಳು ಹೆಣ್ಣುಗಳು ಹೆಂಡಿರಾಗಬೇಕು*
*ಏಳು ಹೆಂಡಿರು ನನ್ನ ಗಂಡ ನನ್ನ ಗಂಡ*
*ಎಂದು ಕಿತ್ತಾಡಿ ಗಂಡನೇ ಸಾಯಬೇಕು*

*ಕಾವಿ ಹೊದ್ದವರೆಲ್ಲಾ ಕಳ್ಳರಾಗಬೇಕು*
*ಋಷಿ ಮಠಗಳಲ್ಲಿ ತೊಟ್ಟಿಲು ಕಟ್ಟಿ ಜೋಗುಳ ಹಾಡಬೇಕು*
*ಏಳು ವರ್ಷದ ಹೆಣ್ಣು ಮಗಳು ಋತುಮತಿ ಆಗಬೇಕು*
*ಹತ್ತು ವರ್ಷದ ಹೆಣ್ಣು ಮಗಳು ಜೋಡಿ ಮಕ್ಕಳ ಹೆರಬೇಕು*
*ಅಣ್ಣನ ಹೆಂಡತಿ ಮೇಲೆ ತಮ್ಮ ಕಣ್ಣಿಡಬೇಕು*
*ತಮ್ಮನ ಹೆಂಡತಿ ಮೇಲೆ ಅಣ್ಣನೇ ಕಣ್ಣಿಡಬೇಕು*
*ತಂಗಿಯ ಚಂದನ ಅಣ್ಣನೇ ನೋಡಬೇಕು*
*ಅಕ್ಕನ ಚಂದನ ತಮ್ಮನೇ ನೋಡಬೇಕು*
*ತಾನು ತಂದ ಸೊಸೆಯ ಮಾವನೇ ಕಟ್ಟಾಳಬೇಕು*

***ಮುಂಡೆ ಗಂಡು ಮಗನ ಹೆರಬೇಕು***
***ಮುಂಡೆ ರಾಜ್ಯ ಆಳಬೇಕು***
***ಆಕಾಶದ ಮೇಲೆ ಧೂಮಕೇತು ಹುಟ್ಟಬೇಕು***
***ರಾಜ ಪಟ್ಟದಿಂದ ಇಳಿಯಬೇಕು***
***ರಾಣಿ ಪಟ್ಟಕ್ಕೆ ಬರಬೇಕು***
***ರಾಜ ರಾಜರೆಲ್ಲಾ ರಾಜ್ಯ ಕಳ್ಕೊಂಡು ಗೋಳಾಡಬೇಕು***

***ಮನೆಯ ರಾಗಿ ಕಲ್ಲು ಮರೆಯಾಗಬೇಕು***
***ಮೂಡಲ ದಿಕ್ಕಲ್ಲಿ ಎರಡು ಸೂರ್ಯ ಹುಟ್ಟಬೇಕು***
***ಭೂಮಿ ನೀರಾಗಬೇಕು***
***ನೀರು ಭೂಮಿಯಾಗಬೇಕು***

ಎಂಬುದಾಗಿ ಕಲಿಯುಗದಲ್ಲಿ ನಡೆಯಬಹುದಾದ ಎಲ್ಲವನ್ನು ಶ್ರೀಮಂಟೇಸ್ವಾಮಿಯವರು ಜಗತ್ತಿಗೆ ಸಾರುತ್ತಾರೆ. ಈ ಪ್ರಪಂಚದಲ್ಲಿ ಜೂಜು, ಪಗಡೆ, ಜಿದ್ದು, ಯುದ್ಧ, ಜಗಳ, ಗಲಭೆ, ವ್ಯಭಿಚಾರ, ಅತ್ಯಾಚಾರ, ಕೊಲೆ, ಮಠಗಳ ಮಲೀನತೆ(ಸಂಸಾರಿಕ ಸುಖದಿಂದ) ಮುಂತಾದ ಎಲ್ಲವು ಈ ಕಲಿಯುಗದಲ್ಲಿ ಅಂತ್ಯಗೊಳ್ಳುತ್ತದೆ. ಕಲ್ಕಿ ಪುರಾಣದ ಪ್ರಕಾರ ಕಲಿಯ ಲಕ್ಷಣವೆಂದರೆ ವಿಪರೀತ ದೂರ್ನಾತ ಹೊಂದಿರುವ ಹೊಗೆ ಮಸಿ ಬಣ್ಣ, ನಾಯಿಯ ಮುಖ, ಎರಡು ಚೂಪಾದ ಕೊರೆಹಲ್ಲು, ಉದ್ದದ ನಾಲಿಗೆ ಹೊಂದಿರುವ ಬೃಹತ್ ರಾಕ್ಷಸ ಎಂದು ಹೇಳುತ್ತಾರೆ.  ಇವನು ತನ್ನ ಜೊತೆಯಲ್ಲಿ ದೊಡ್ಡ ಮೂಳೆಯನ್ನು ಇಟ್ಟುಕೊಂಡಿದ್ದನು.  ಈ ರಾಕ್ಷಸ ಕಲಿಯು ಕೊಲೆ, ಹತ್ಯೆ, ದರೋಡೆ, ಜೂಜು, ಮೋಜು, ಮಸ್ತಿ, ವ್ಯಭಿಚಾರ, ಮಧ್ಯ, ಚಿನ್ನ, ಆಸ್ತಿ, ನಗ–ನಾಣ್ಯಗಳನ್ನು ತನ್ನ ವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದಾನೆ. ಈ ವಸ್ತುಗಳು ಎಲ್ಲಿ ಇರುತ್ತವೆಯೋ ಅಲ್ಲಿ ಕಲಿಪುರುಷ ಇದ್ದೆ ಇರುತ್ತಾನೆ.  ಜನಪದರರು ಕಲಿಗಾಲದಲ್ಲಿ ಶನೇಶ್ವರನು ಕಲಿಯ ರೂಪತಾಳಿ ದುಷ್ಟರನ್ನು ಸದೆಬಡಿದು ಶಿವನ ಅನುಗ್ರಹದಂತೆ ತನ್ನ ವಕ್ರದೃಷ್ಟಿ ಮೂಲಕ ದುರುಳರಿಗೆ ಶಿಕ್ಷೆ ನೀಡುತ್ತಾನೆ ಎಂದಿದ್ದಾರೆ. ಶನೇಶ್ವರನಾ ಇನ್ನೊಂದು ರೂಪವೇ **'ಕಲಿ'** ಎಂದು ಹೇಳಿದರೆ ತಪ್ಪಾಗುವುದಿಲ್ಲ ಎನ್ನುವುದು ನನ್ನ ಅಭಿಪ್ರಾಯ.

**ಉಪಸಂಹಾರ**

ನಿಂತ ನೀರು ಬಂಡೆ ಕೊರೆಯಿತು ಎನ್ನುವ ಮಾತಿದೆ.  ಇದರ ಅರ್ಥ ಒಂದು ವಸ್ತು, ವ್ಯಕ್ತಿ, ಪ್ರಾಣಿ ಒಂದು ಕಡೆಯೇ ನಿಂತರೆ ಆ ಭಾಗ ಸಂಪೂರ್ಣ ನಾಶ ಹೊಂದುತ್ತದೆ ಎಂದರ್ಥ.  ಈ ಸಮಾಜವು ನಿಂತ ನೀರಲ್ಲ ಅದು ಸದಾಕಾಲ ಹರಿಯುವ ತೊರೆ.  ಈ ಪ್ರಕಾರವಾಗಿಯೇ ಜಗಧೀಶ್ವರನಾ ಸ್ವರೂಪನಾದ ಶ್ರೀ ಧರೆಗೆದೊಡ್ಡವರು ಕೈಲಾಸದಿಂದ ಕಲ್ಯಾಣದ ಮೂಲಕ ಬೊಪ್ಪೇಗೌಡನಪುರಕ್ಕೆ ಬಂದು ಒಂದು ಬಾವಿಯ ಒಳಗೆ ಪಾತಾಳ ಲೋಕದಲ್ಲಿ ನೆಲೆಸಿದ್ದಾರೆ.  ಸೃಷ್ಟಿಯ ಆದಿಯಲ್ಲಿ ಆದಿಶಕ್ತಿ ನಂತರ ಜನ್ಮ ತಳೆದ ಶಿವ ನಂತರ ಅವಳ ಮೋಹಕ್ಕೆ ಬಲಿಯಾಗದೆ ಆದಿಶಕ್ತಿಯ ಎಲ್ಲಾ ವಿದ್ಯೆಯನ್ನು ಪರಂಗತ ಮಾಡಿಕೊಂಡು ಅವಳನ್ನೇ ನಾಶ ಮಾಡಿದ.  ಸೃಷ್ಟಿಕರ್ತ ಈಶ್ವರ. ಹಾಗೆಯೇ ಈ ಸೃಷ್ಟಿಯ ನಾಶದ ಕಾರಣಕರ್ತನು ಶಿವನೇ

ಆಗಿದ್ದಾನೆ. ಹಾಗಾಗಿ ಪರಶಿವನನ್ನು ಸೃಷ್ಟಿ–ಲಯದ ಸ್ವರೂಪವೆನ್ನಬಹುದು. ಕಾಲಜ್ಞಾನಿಯಾದ ಈಶ್ವರ ಕಲಿಯುಗವನ್ನು ಗುರುತಿಸಿ, ಕಲಿಯನ್ನು ಜಲದೊಳಗೆ ಮುಳುಗಿಸಿದ. ಒಂದು ವೇಳೆ ಜಲಪ್ರಳಯದ ಮೂಲಕ ಸೃಷ್ಟಿಯು ನಾಶವಾದರೆ ನಂತರ ಪಾತಾಳ ಲೋಕದಿಂದ ಮೇಲೆ ಬಂದು ಮರುಸೃಷ್ಟಿ ಮಾಡುವೆನೆಂದು ಧರೆಗೆದೊಡ್ಡವರ ರೂಪದಲ್ಲಿ ಪಾತಾಳ ಲೋಕದಲ್ಲಿ ಧ್ಯಾನಮಗ್ನರಾಗಿದ್ದಾರೆ.

ಒಟ್ಟಿನಲ್ಲಿ ಇಡೀ ವಿಶ್ವವೇ ಪ್ರಳಯವಾಗಿ ಸೃಷ್ಟಿನಾಶವಾದಾಗ ಜಲದೊಳಗಿರುವ ಕಲಿ ಮೇಲೆ ಬಂದಂತೆ. ಕಲಿಯನ್ನು ನೋಡದೆ ಪಾತಾಳ ಲೋಕದಲ್ಲಿ ಧ್ಯಾನಿಸುತ್ತಿರುವ ಧರೆಗೆದೊಡ್ಡವರು ಪ್ರಳಯದ ನಂತರ ಮೇಲೆ ಬಂದು ಪ್ರಪಂಚವನ್ನು ಮತ್ತೆ ಸೃಷ್ಟಿಸುತ್ತಾರೆ. ಪ್ರಸ್ತುತ ಸಮಾಜದಲ್ಲಿ ಹಿರಿಯರು–ಕಿರಿಯರ ಗೌರವ, ಘನತೆ, ಗಾಂಭೀರ್ಯ ಕಡಿಮೆಯಾಗಿ ದರ್ಪ, ಅಹಂ, ಅಧಿಕಾರ ಹೆಚ್ಚಾಗಿರುತ್ತಿರುವುದು ಸೃಷ್ಟಿ ವಿನಾಶದ ಅಂತಿಮ ಎಂದು ತಿಳಿಯಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಅರವಿಂದ ಮಾಲಗತ್ತಿ, ಕನ್ನಡ ವಿಷಯ ವಿಶ್ವಕೋಶ (ಜಾನಪದ). ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
- ಕಲಿ (2021), ಮಾಹಿತಿಯನ್ನು https://kn.wikipedia.org/wiki/ಕಲಿ ಅಂತರ್ಜಾಲ ಕೊಂಡಿಯಿಂದ ದಿನಾಂಕ 12/03/2021 ರಂದು ಪಡೆಯಲಾಗಿದೆ.
- ಚತುರ್ವೇದಿ ಬಿ. ಕೆ. (2004). ಕಲ್ಕಿ ಪುರಾಣ, ಡೈಮಂಡ್ ಬುಕ್ ಪಬ್ಲಿಕೇಷನ್, ನ್ಯೂ ಡೆಲ್ಲಿ.
- ನದಿ: ನಾಗರಿಕತೆ–ಸಂಸ್ಕೃತಿಗಳ ತೊಟ್ಟಿಲು. (ಮೇ 7, 2018). ಪ್ರಜಾವಾಣಿ ದಿನಪತ್ರಿಕೆ, ಬೆಂಗಳೂರು.
- ನದಿ ಮೂಲ ಅರಿಯದಿದ್ದರೂ ಜೀವ ಜಲದ ಮೌಲ್ಯ ಅರಿಯಲಿ. (ಮಾರ್ಚ್ 6, 2018). ಪ್ರಜಾನುಡಿ ದಿನಪತ್ರಿಕೆ, ಮೈಸೂರು.
- ಮಾಂಬಳ್ಳಿ ಮಹದೇವು ಕೆ. ಧರೆಗೆ ದೊಡ್ಡವರು ಶ್ರೀಮಂಟೇಸ್ವಾಮಿ. ಕುವೆಂಪುನಗರ, ಮೈಸೂರು.


**ವಕ್ತೃ**

- ಕೊಳತ್ತೂರು ಪಿ. ಮಹದೇವಸ್ವಾಮಿ. (39 ವರ್ಷ). ತಂಬೂರಿ ವಾದಕರು ಮತ್ತು ಜಾನಪದ ಗಾಯಕರು, ಕೊಳತ್ತೂರು, ಟಿ.ನರಸೀಪುರು ತಾಲೂಕು, ಮೈಸೂರು ಜಿಲ್ಲೆ.